ಲೂಸಿ ಬಂದೇನವಾಜ್ ದರ್ಗಾಕ್ಕೆ ಹರಕೆ ಹೊತ್ತುಕೊಂಡಳು
ನರಸಿಂಗರಾಯ ಯೇಸುವಿಗೊಂದು ಮೋಂಬತ್ತಿ ಹೊತ್ತಿಸಿದ
ಜೇಮ್ಸ್ ದಯಾನಂದ ಗಣಪತಿಗೆರಡು ತುಪ್ಪದ ದೀಪ ಹಚ್ಚಿದ
ಮೂವರೂ ನೋಡಬಾರದ್ದನ್ನು ನೋಡಿಬಿಟ್ಟವರಂತೆ
ಮುಚ್ಚಿಕೊಂಡರು ಕಣ್ಣು

ಯಾರು ಹೊಣೆ ಇದಕ್ಕೆ? ಯಾಕೆ ಹೀಗಾಗುತ್ತದೆ? ಉತ್ತರವಿದೆಯೆ ನಮ್ಮ ಬಳಿ? ಮನದಲ್ಲಿ ಹೊಳೆಯುವ ಉತ್ತರ ಒಪ್ಪುವ ಮನಸ್ಸಿದೆಯೆ ನಮಗೆ? ನಮ್ಮೊಳಗನ್ನೇ ಬಗೆಯುವ ಇಂಥ ಹಲವು ಕವಿತೆಗಳಿವೆ ಇಲ್ಲಿ.

ಭಾಷೆಯ, ಭಾವದ ದುಂದುಗಾರಿಕೆಯನ್ನು ವಿರೋಧಿಸಿದ ನವ್ಯ ಕಾವ್ಯದ ವಕ್ತಾರರಂತೆ ದಿವಾಕರರು ಕಾಣಿಸುತ್ತಾರೆ. ರೂಪಕಗಳನ್ನು, ಪ್ರತಿಮೆಗಳನ್ನು ನಂಬಿ ಹೊರಟ ಈ ಕಾವ್ಯ, ಕನ್ನಡವೂ ಸೇರಿದಂತೆ ಭಾರತೀಯ ಕಾವ್ಯವೇ ತೆಗೆದುಕೊಂಡಿರುವ ಯುಟರ್ನ್‌ನ ಸಮರ್ಥ ಪ್ರತಿನಿಧಿ. ಅಡಿಗರು, ರಾಮಾನುಜನ್, ಯೇಟ್ಸ್, ಎಲಿಯೆಟ್ ಈ ಎಲ್ಲರ ಕಾವ್ಯವೂ ನೆನಪಾಗುತ್ತದೆ, ಇಲ್ಲಿನ ಕವಿತೆಗಳನ್ನು ಓದುತ್ತಿದ್ದರೆ. ಅವರ ಪ್ರಭಾವದ ಕಾರಣಕ್ಕಾಗಿಯಲ್ಲ. ಅವರೆಲ್ಲರೂ ಪ್ರತಿನಿಧಿಸಿದ ಕಾವ್ಯದ ಮಾದರಿಯು ಇವರ ಕಾವ್ಯದ ಮಾದರಿಯೂ ಆಗಿದೆ ಎನ್ನುವ ಕಾರಣಕ್ಕೆ.

ದಿವಾಕರರಿಗೆ ಕಾವ್ಯ ಎನ್ನುವುದು ಅರಳುವ ಹೂವಿನಂತೆಯೇ ಕಟ್ಟುವ ಕಾಯಕವೂ ಹೌದು. ದಿನರಾತ್ರಿ ಕೂತು ನೇಯಬೇಕಾದ ನೇಯ್ಗೆಯೂ ಹೌದು. ಆದರೆ ಇದು ಶ್ರೇಷ್ಠತೆಯ ವ್ಯಸನವಲ್ಲ. ಕಾವ್ಯ ಶಿಲ್ಪದ ಸೌಂದರ್ಯವನ್ನು ಮಾತ್ರ ಗುರಿಯಾಗಿಟ್ಟುಕೊಂಡ ಎಲೈಟ್ ಕಾವ್ಯವಾಗುವುದನ್ನು ಇದು ಯಾವ ಕಾರಣಕ್ಕೂ ಒಪ್ಪುತ್ತಿಲ್ಲ. ಬೆಂದರೆ ಬೇಂದ್ರೆಯಾಗುವ, ನೊಂದ ನೋವೇ ಹಾಡಾಗಬೇಕಾದ ಜೀವಪರತೆಯನ್ನು ಒಪ್ಪುವ ಮಾದರಿ. ಹೀಗೆ ಕಾವ್ಯವನ್ನು ನೇಯುವುದು, ಬದುಕಿನ ಸಂಕಟಗಳನ್ನು ಎದುರಿಸಲು ಬೇಕಾದ ತಯಾರಿಯೂ ಆಗಿರುತ್ತದೆ ಎನ್ನುವ ನಂಬಿಕೆಯೊಂದು ಇಲ್ಲಿ ಕೆಲಸ ಮಾಡುತ್ತಿದೆ. ಏಕೆಂದರೆ, ಸಂಕಟಗಳನ್ನು ಹಾಯಲು ಮೊದಲು ಬೇಕಾದ್ದು ಆತ್ಮಶೋಧವೆಂದರೆ, ಆ ಆತ್ಮಶೋಧಕ್ಕೆ ಬೇಕಾದ ಮನೋವಿನ್ಯಾಸವನ್ನು ಕಾವ್ಯ ನಿಧನಿಧಾನವಾಗಿ ರೂಪಿಸುತ್ತದೆ. ವ್ಯಕ್ತಿ ತನ್ನನ್ನೂ ಬದುಕನ್ನೂ ಲೋಕವನ್ನೂ ವಸ್ತುನಿಷ್ಠವಾಗಿ ನೋಡಲು ಬೇಕಾದ 'ಮತಿ ದರ್ಪಣ'ವಾಗಿ ಕಾವ್ಯವನ್ನು ಈ ಮಾದರಿ ಬಳಸಲು ಹಂಬಲಿಸುತ್ತದೆ. ಆದ್ದರಿಂದಲೇ ಪ್ರತಿಯೊಂದು ಕವಿತೆಯೂ ಭರವಸೆಯ ವ್ಯವಸಾಯ ಎನ್ನುವುದು ಕೇವಲ ಕಾವ್ಯ ಕಟ್ಟುವ ಕಸುಬುದಾರಿಕೆಯ ವ್ಯಾಖ್ಯಾನವಲ್ಲ, ಅದು ಬದುಕನ್ನು ಎದುರಿಸಲು ಬೇಕಾದ ವ್ಯವಸಾಯವೂ ಹೌದು.

ಎಷ್ಟೋ ಕಾಲದ ಮೇಲೆ ಒಂದು ಅಪ್ಪಟ ಕವನ ಸಂಕಲನವನ್ನು ಓದುವ ಅನುಭವ ತಂದುಕೊಡುವ ಈ ಸಂಕಲನ, ಕನ್ನಡದ ಮುಖ್ಯ ಸಂಕಲನಗಳಲ್ಲಿ ಒಂದು. ಇದಕ್ಕೆ ಎಚ್. ಎಸ್. ಶಿವಪ್ರಕಾಶರು ಬರೆದಿರುವ ಮುಮ್ಮಾತುಗಳು ಇವರ ಕಾವ್ಯದ ಶಕ್ತಿಯನ್ನು ಹಿಡಿದಿರುವಂತೆಯೇ ಕಾವ್ಯವನ್ನು ಕುರಿತ ಅತ್ಯಂತ ಸೃಜನಶೀಲವಾದ ಹೊಳಹುಗಳೂ ಆಗಿವೆ. ಈ ಎಲ್ಲವೂ ಸೇರಿ ಇದರ ಮಹತ್ವ ಇನ್ನಷ್ಟು ಹೆಚ್ಚಾಗಿದೆ ಎನ್ನುವುದು ಉತ್ಪ್ರೇಕ್ಷೆ ಅಲ್ಲವೇ ಅಲ್ಲ.

ಕಾವ್ಯದ ಮೇಲಿನ ನಂಬಿಕೆ ಮತ್ತು ಪ್ರೀತಿಯನ್ನು ಹೆಚ್ಚಿಸಿರುವ ಈ ಸಂಕಲನ ಕನ್ನಡ ಕಾವ್ಯದ ಶಕ್ತಿಯನ್ನೂ ಹೆಚ್ಚಿಸಿದೆ.